ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 92/2011**

**ಫ್ರಾಸಾ- 42 ಚಾಸಾ- 44**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಪ್ರದೀಪ್ |
| ತಂದೆಯ ಹೆಸರುಃ | : | ದೇವರಾಜು |
| ವಯಸ್ಸುಃ | : | 45 ವರ್ಷ |
| ಉದ್ಯೋಗಃ | : | ಖಾಸಗಿ ಕೆಲಸ |
| ವಾಸ | : | ಚೆನ್ನೈ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 24-04-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಬೆಂಗಳೂರಿನ ಐಸಿಐಸಿಐ ಬ್ಯಾಂಕ್ ನಲ್ಲಿ ನಾನು 2010 ರಿಂದ 2013ರವರೆಗೆ ಬ್ಯಾಂಕ್ ಆಪರೇಷನ್ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿಃ10-2-2011ರಂದು ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸ್ ಠಾಣೆಯ ಪೊಲೀಸ್ ಉಪಾಧೀಕ್ಷಕರು ಸಿ ಆರ್ ಶೇಖರ್ ಎಂಬುವವರಿಗೆ ಸಂಬಂಧಿಸಿದ ಐಸಿಐಸಿಐ ಖಾತೆ ಸಂಖ್ಯೆ 004701546635ಕ್ಕೆ ಸಂಬಂಧಿಸಿದ ಬ್ಯಾಂಕ್ ಸ್ಟೇಟ್ಮೆಂಟನ್ನು ನೀಡುವಂತೆ ಮನವಿ ಸಲ್ಲಿಸಿದ್ದರು. ಅದರಂತೆ ನಾನು ದಿಃ21-2-2011ರ ಪತ್ರದೊಂದಿಗೆ ಆ ಬ್ಯಾಂಕ್ ಸ್ಟೇಟ್ಮೆಂಟನ್ನು ನೀಡಿರುತ್ತೇನೆ. ಆ ಪತ್ರ ಮತ್ತು ಸ್ಟೇಟ್ಮೆಂಟನ್ನು ನೋಡುತ್ತಿದ್ದು ಪತ್ರವನ್ನು ನಿಪಿ-82 ಎಂದು ಸಾಕ್ಷಿಯ ರುಜುವನ್ನು ನಿಪಿ-82(ಎ) ಎಂದು ಗುರುತಿಸಲಾಯಿತು. ನಾನು ನೀಡಿರುವ ಸ್ಟೇಟ್ಮೆಂಟನ್ನು ನೋಡುತ್ತಿದ್ದು ಅದು ಒಟ್ಟು 9 ಹಾಳೆಗಳನ್ನೊಳಗೊಂಡಿದ್ದು ಒಟ್ಟಾಗಿ ನಿಪಿ-83

ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಬಿ ಜೆ ಪಿ ಎಸ್ ವಕೀಲರಿಂದಃ</u>**

ನಿಪಿ-83ರ ಸ್ಟೇಟ್ಮೆಂಟ್ ಸಿ ಆರ್ ಶೇಖರ್ ರವರ ಸಂಬಳಕ್ಕೆ ಸಂಬಂಧಿಸಿದ್ದು ಮತ್ತು ಅವರ ಸಂಬಳ ಅದಕ್ಕೆ ಜಮಾ ಆಗುತ್ತಿತ್ತು ಎಂದರೆ ಈಗ ನನಗೆ ಹೇಳಲಾಗುವುದಿಲ್ಲ. ನಿಪಿ-83ರಲ್ಲಿ ಹಾಳೆ 1 ರಲ್ಲಿ ಮೇ ತಿಂಗಳ ಸಂಬಳ ಜಮಾ ಆಗಿದೆ ಎಂದು ಕಂಡುಬರುತ್ತಿದೆ ಎಂದರೆ ಸರಿ. 2007 ರಿಂದ 2009ರವರೆಗಿನ ಸ್ಟೇಟ್ಮೆಂಟನ್ನು ನಾನು ಲೋಕಾಯುಕ್ತದವರಿಗೆ ನೀಡಿರುತ್ತೇನೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**